ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್
ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್
ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 18॥ UDP/1263/2018-20 || R.NO.50495/91 ॥ ತಾರೀಕು : 12–06–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಬಿರುಗಾಳಿಯೊಂದಿಗೆ ಮುಂಗಾರು ಭರ್ಜರಿ ಆರಂಭ



ಈ ಭಾರಿಯ ಮುಂಗಾರುಮಳೆ ಭರ್ಜರಿ ಆರಂಭಮಾಡಿದೆ. ಆದರೆ ಕಳೆದ ಕೆಲವು ದಿನಗಳಿಂದ ಮಳೆಗಿಂತ ಹೆಚ್ಚು ಬೀಸುತ್ತಿರುವ ಬಿರುಗಾಳಿ ಆತಂಕವನ್ನು ಉಂಟುಮಾಡಿದೆ. ಕರಾವಳಿಯುದ್ದಕ್ಕೂ ಬಿರುಗಾಳಿಯಿಂದ ಲಕ್ಷಾಂತರ ರೂ ಹಾನಿಯಾಗಿದ್ದು ಅಧಿಕಾರಿಗಳು, ಶಾಸಕರು ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ. ಮಳೆಯ ಅಬ್ಬರ ಕಳೆದೆರಡು ದಿನಗಳಿಂದ ಸ್ವಲ್ಪ



ಕಡಿಮೆಯಾಗಿದ್ದರೂ ಬಿರುಗಾಳಿ ಮಾತ್ರ ಸತತವಾಗಿ ಬೀಸುತ್ತಲೇ ಇದ್ದು ಕಳವಳ ಉಂಟುಮಾಡುವಂತಿದೆ. ಗಾಳಿ ಮಳೆಯ ಅಬ್ಬರಕ್ಕೆ ಕರಾವಳಿಯ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಜನಜೀವನ ಅಸ್ತವ್ಯಸ್ತವಾಗಿದ್ದು ಉರುಳಿದ ಮರಗಳು ಹಾನಿಯಾದ ಕಟ್ಟಡಗಳು , ಅಲ್ಲಲ್ಲಿ ಅಪಘಾತಗಳು ಸಮಸ್ಯೆಯನ್ನು ಉಂಟುಮಾಡಿವೆ.

ಬಹುತೇಕ ರಾಷ್ಟ್ರೀಯ ಹೆದ್ದಾರಿ ಹಾಗೂ ಮುಖ್ಯ ರಸ್ತೆಗಳಲ್ಲಿ ತಗ್ಗುಗಳಲೆಲ್ಲ ನೀರು ನಿಂತು ಸಮಸ್ಯೆಯಾಗಿದೆ. ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕೆಲವೆಡೆ ಅರ್ಧಾಂಶ ಆಗಿರುವುದರಿಂದ ಸಮಸ್ಯೆ ಉಂಟಾಗಿದೆ. ಅದರಲ್ಲೂ ಕುಂದಾಪುರ ಶಾಸ್ತ್ರಿವೃತ್ತದಿಂದ ತ್ರಾಸಿ ತನಕ ಕಾಮಗಾರಿ ಸಮಸ್ಯೆಯಿಂದ ಬಹಳಷ್ಟು ತೊಂದರೆ ವಾಹನ ಚಾಲಕರಿಗೂ , ಗ್ರಾಮಸ್ಥರಿಗೂ ಉಂಟಾಗಿದ್ದು ತುರ್ತು ಕ್ರಮ ಕೈಗೊಳ್ಳದಿದ್ದರೆ ಗಂಭೀರ ಪರಿಸ್ಥಿತಿ ಎದುರಿಸಬೇಕಾಗುತ್ತದೆ.

ಈ ನಡುವೆ ಕಳೆದ ಕೆಲವು ದಿನಗಳಿಂದ ವಿದ್ಯುತ್ ಸಮಸ್ಯೆಯು ಬಿಗಡಾಯಿಸುತ್ತಿದ್ದು ವಿದ್ಯುತ್ ಇಲ್ಲದೇ ಸಾರ್ವಜನಿಕರು ಪರದಾಡುವಂತಾಗಿದೆ. ಅಲ್ಲಲ್ಲಿ ಮರಗಳು ಉರುಳಿ, ಎಲೆಕ್ಟ್ರಿಕ್ ಕಂಬಗಳು ಉರುಳಿ ಸಮಸ್ಯೆ ಉಂಟಾಗಿದೆ ಎಂದು ಮೆಸ್ಕಾಂ ಅಧಿಕಾರಿಗಳು ಹೇಳುತ್ತಿದ್ದಾರೆ. ದಿನವಿಡೀ ವಿದ್ಯುತ್ ಸರಬರಾಜು ಇಲ್ಲದಿದ್ದಾಗ ಕಛೇರಿಗಳಿಗೂ ಹಾಗೂ ಮನೆಯವರಿಗೂ ಬಹಳ ಸಮಸ್ಯೆ ಎದುರಿಸಬೇಕಾಗುತ್ತದೆ. ಅನಿವಾರ್ಯ ಸಂದರ್ಭಗಳಲ್ಲಿ ಉಪಯೋಗಿಸುವ ಇನ್‌ವರ್ಟರ್‌ಗಳು , ಸೋಲಾರ್ ಉಪಕರಣಗಳು ಕೈಕೊಡುತ್ತಿರುವುದರಿಂದ ಕತ್ತಲೆಯ ಅನುಭವ ಹೆಚ್ಚಿನವರಿಗೆ ಉಂಟಾಗಿದೆ.

ಈಗ ಹಲವು ಕಡೆ ತುಂಬಿದ ನೀರನ್ನು ಹರಿಯಲು ಬಿಡುವ ಕಾಮಗಾರಿ ನಡೆಯುತ್ತಿದೆ. ಉರುಳಿದ ಮರಗಳನ್ನು ತೆಗೆಸುವ ಕೆಲಸ ನಡೆಯುತ್ತಿದೆ. ಟ್ರಾಫಿಕ್ ಸಮಸ್ಯೆ ಪರಿಹರಿಸುವ ಸಮಸ್ಯೆ ನಡೆಯುತ್ತಿದೆ.

**ದೂರವಾಣಿ ಸಮಸ್ಯೆ** : ಈ ನಡುವೆ ದೂರವಾಣಿ ಸಂಪರ್ಕ ಸರಿಯಿಲ್ಲದೇ ಗ್ರಾಮೀಣ ಪ್ರದೇಶದಲ್ಲಿ ಬಹಳ ಸಮಸ್ಯೆ ಉಂಟಾಗಿದೆ. ಅದರಲ್ಲೂ ಬಿಎಸ್‌ಎನ್‌ಎಲ್ ದೂರವಾಣಿ ಸಂಪರ್ಕ ವ್ಯವಸ್ಥೆ ಬಹಳಷ್ಟು ಕಡೆ ಕೆಟ್ಟುಹೋಗಿದೆ. ಮೊಬೈಲ್ ಸಂಪರ್ಕವೂ ಹೆಚ್ಚಿನ ಕಡೆ ದೊರೆಯುತ್ತಿಲ್ಲ. ಈ ಎಲ್ಲ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸುವ ಅಗತ್ಯವಿದೆ.

ಆದರ್ಶ ಆಸ್ಪತ್ರೆ
ರಾ.ಹೆ.66, ಕುಂದಾಪುರ
ADARSHA HOSPITAL KUNDAPURA

ನೂತನ ಆಸ್ಪತ್ರೆ ಕಟ್ಟಡ ಉದ್ಘಾಟನಾ ಸಮಾರಂಭ
ದಿನಾಂಕ : 17–06–2018 ಬೆಳಿಗ್ಗೆ 11 ಗಂಟೆಗೆ
ಉದ್ಘಾಟಕರು : ಪ್ರೊ.ಡಾ.ಕೆ.ವಿ.ದೇವಾಡಿಗ
Consultant, Neurosurgeon
ಅಧ್ಯಕ್ಷತೆ : ಪ್ರೊ.ಡಾ.ಎ.ವಿ.ಶೆಟ್ಟಿ
Consultant, cordiologist
ಮುಖ್ಯ ಅತಿಥಿ : ಪ್ರೊ.ಮ್ಯಾಥ್ಯೂ ಸಿ. ನಿನನ್
ಡೈರೆಕ್ಟರ್, ಲಿಟ್ಲರೋಕ್ ಇಂಡಿಯನ್ ಸ್ಕೂಲ್, ಬ್ರಹ್ಮಾವರ
ಶುಭಾಶಂಸನೆ : ಶ್ರೀ ಎ.ಎಸ್.ಎನ್.ಹೆಬ್ಬಾರ್
ಹಿರಿಯ ವಕೀಲರು, ಕುಂದಾಪುರ
ಡಾ.ಕೆ.ಎಸ್.ಕಾರಂತ್,
"ಸತ್ಯ ಮಾನಸ" ಕುಂದಾಪುರ
ಸೀತಾರ್ ವಾದನ
ಉಸ್ತಾದ್ ರಫೀಕ್ ಖಾನ್ " ಅವರಿಂದ
ಎಲ್ಲರಿಗೂ ಸ್ವಾಗತ ಬಯಸುವ
ಡಾ। ಮಧು ಮಯೂರಿ ಮತ್ತು ಡಾ.ಆದರ್ಶ ಹೆಬ್ಬಾರ್
ಶುಭ ಹಾರೈಕೆ
ಡಾ। ಶ್ರೀಮತಿ ಛಾಯಾ ವಿ.ಹೆಬ್ಬಾರ್ ಮತ್ತು ಶ್ರೀ ಎ.ವಿ.ಹೆಬ್ಬಾರ್
ಡಾ.ಶ್ರೀಮತಿ ವಿಮಲ್ ಹಾಗೂ ನಿವೃತ್ತ ವಿಂಗ್‌ಕಮಾಂಡರ್ ಶ್ರೀ ವಿ.ಪಿ.ಶ್ರೀವಾತ್ಸವ್
ಶ್ರೀಮತಿ ವಿಜಯಾ ಹೆಬ್ಬಾರ್ ಹಾಗೂ ಕುಟುಂಬದವರು
ಶ್ರೀ ನರಸಿಂಹ ಹೆಬ್ಬಾರ್ ಹಾಗೂ ಕುಟುಂಬದವರು
ಶ್ರೀ ರಾಜಶೇಖರ ಹೆಬ್ಬಾರ್ ಹಾಗೂ ಕುಟುಂಬದವರು
ಡಾ। ಭಾರತಿ ಮಯ್ಯ
ಶ್ರೀಮತಿ ಶಾರದಾಂಬಾ ಹಾಗೂ ಕುಟುಂಬದವರು
ಡಾ.ವಾಸುದೇವ ಆಚಾರ್ಯ ಹಾಗೂ ಕುಟುಂಬದವರು
ಅನಘ ಮತ್ತು ಅಗಸ್ತ್ಯ